ಓ ಎಸ್ ನಂ. 59/2021
ಪಿ ಡಬ್ಲ್ಯೂ: 1
ದಿನಾಂಕ 05-06-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: 17 ರಿಂದ 19ನೇ ಪ್ರತಿವಾದಿ ಪರ: ಶ್ರೀ ಸಿ ಎಂ ಜಿ ವಕೀಲರಿಂದ:</u>

ಈ ಕೇಸಿನ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನನ್ನ ತಾಯಿಯಾದ ಗಂಗಮ್ಮ ಈ ದಾವೆಯನ್ನು ಹೂಡಿರುತ್ತಾರೆ. ವಕೀಲರಿಗೆ ಮಾಹಿತಿಯನ್ನು ನಾನು ಮತ್ತು ನನ್ನ ತಾಯಿ ಸೇರಿ ನೀಡಿರುತ್ತೇವೆ. ವಾದಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದೆ. ನನ್ನ ತಾಯಿ ಈಗ ಆರೋಗ್ಯವಾಗಿದ್ದು, ಓಡಾಡುತ್ತಾರೆ ಎಂದರೆ ನಿಜ. ನನ್ನ ತಾಯಿಗೆ ಈಗ 90 ವರ್ಷ ವಯಸ್ಸಾಗಿರುತ್ತದೆ. ಈ ದಾವೆಯನ್ನು ಒಟ್ಟು 22-23 ಸರ್ವೆ ನಂಬರುಗಳ ಮೇಲೆ ಮತ್ತು ಒಟ್ಟು 48 ಎಕರೆ ಆಸ್ತಿಯ ಮೇಲೆ ಹಾಕಲಾಗಿದೆ. ದಾವಾ ಆಸ್ತಿಗಳಲ್ಲಿ ಕೆಲವು ಜಮೀನುಗಳನ್ನು ಮಾರಾಟ ಮಾಡಲಾಗಿದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಮಗೆ ಗೊತ್ತಿಲ್ಲದಂತೆ ಮಾರಾಟ ಮಾಡಲಾಗಿದೆ ಎಂದು ನುಡಿದಿರುತ್ತಾರೆ. ಆಸ್ತಿಗಳನ್ನು ಖರೀದಿಸಿದವರ ಹೆಸರಿಗೆ ಖಾತೆ ಇದೆ ಎಂದರೆ ನಿಜ.

ನಾನು ಮತ್ತು ನನ್ನ ತಾಯಿ ಎಂ ಚೋಮನಹಳ್ಳಿಯಲ್ಲಿ ವಾಸ ಇದ್ದೇವೆ ಎಂದರೆ ನಿಜ. ದಾವಾ ಆಸ್ತಿಗಳು ಎಂ ಚೋಮನಹಳ್ಳಿಯಲ್ಲಿದೆ ಎಂದರೆ ನಿಜ. ಆಸ್ತಿಗಳನ್ನು ಖರೀದಿಸಿರುವವರು ಎಂ ಚೋಮನಹಳ್ಳಿ ಗ್ರಾಮದವರೇ ಎಂದರೆ ನಿಜ. ದಾವಾ ಐಟಂ ನಂ.35 ರಲ್ಲಿ 6 ಗುಂಟೆ

ಆಸ್ತಿಯನ್ನು ದೇವಿರಮ್ಮ, ಈಶ್ವರಪ್ಪ ಮತ್ತು ಯಶೋಧ ಎನ್ನುವವರು ಕರಿಬಸಪ್ಪ ಎನ್ನುವವರಿಗೆ 2017 ರಲ್ಲಿ ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ದೇವಿರಮ್ಮ ಜೀವಂತ ಇರಲಿಲ್ಲ ಎಂದು ನುಡಿದಿರುತ್ತಾರೆ. ದೇವಿರಮ್ಮ 2017 ರಲ್ಲಿ ಜೀವಂತ ಇದ್ದು ಕ್ರಯಪತ್ರ ಮಾಡಿಕೊಟ್ಟಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೇವಿರಮ್ಮ ಮರಣ ಹೊಂದಿ ಸುಮಾರು 15 ವರ್ಷಗಳಾಗಿರುತ್ತವೆ. ಅದರ ಬಾಬ್ತು ದಾಖಲೆ ನನ್ನ ಬಳಿ ಇರುವುದಿಲ್ಲ.

2018 ರಲ್ಲಿ ಕರಿಬಸಪ್ಪ ಎನ್ನುವವರು ಸುರೇಶ್ ಎನ್ನುವವರಿಗೆ ದಾವಾ ಐಟಂ ನಂ.35 ರ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತದನಂತರ 2019 ರಲ್ಲಿ ಸುರೇಶ್ ಎನ್ನುವವರು ವಿಶ್ವನಾಥ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ವಿಶ್ವನಾಥರವರು ಖಾತೆ ಮಾಡಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 20 ವರ್ಷಗಳಿಂದ ಎಂ ಚೋಮನಹಳ್ಳಿಯಲ್ಲಿ ವಾಸ ಇದ್ದೇನೆ.

ದಾವಾ ಐಟಂ ನಂ.35 ರಲ್ಲಿ 6 ಗುಂಟೆ ಆಸ್ತಿಯನ್ನು ದೇವಿರಮ್ಮ, ಈಶ್ವರಪ್ಪ ಮತ್ತು ಯಶೋಧ ಎನ್ನುವವರು ಮಾರಾಟ ಮಾಡಿದಾಗಿನಿಂದಲೂ ನಮ್ಮ ಕುಟುಂಬದವರಿಗೆ ಸದರಿ ಆಸ್ತಿಯ ಮೇಲೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ

ಭಾಗ ನೀಡಿಲ್ಲ ಎಂದು ನುಡಿದಿರುತ್ತಾರೆ. ಖರೀದಿ ಮಾಡಿದಾಗಿನಿಂದಲೂ ಖರೀದಿದಾರರೇ ಸ್ವಾಧೀನದಲ್ಲಿದ್ದಾರೆ ಎಂದರೆ ನಿಜ. ದಾವಾ ಐಟಂ ನಂ.35ರ ಆಸ್ತಿಯಲ್ಲಿ ವಿಶ್ವನಾಥರವರೇ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಆಸ್ತಿ ಮಾರಾಟವಾಗಿದ್ದರೂ ಸಹ ನನ್ನ ತಾಯಿಗೆ ಚಿತಾವಣೆ ಮಾಡಿ ಅವರ ಮೂಲಕ ದಾವೆ ಸಲ್ಲಿಸುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. 17 ರಿಂದ 19ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಲಾಗಿದೆ ಮತ್ತು ಅವರ ವಿರುದ್ದ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.